**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 7/2015**

**ದೋ.ಸಾ. : 2 ಪ್ರಾ.ಸಾ. : 1**

| | |
|---|---|
| ಸಾಕ್ಷಿಯ ಹೆಸರು | : ದರ್ಶನ |
| ತಂದೆಯ ಹೆಸರು | : ಶಾಂತಾರಾಮ ನಾಯ್ಕ |
| ವಯಸ್ಸು | : 40 ವರ್ಷ |
| ಉದ್ಯೋಗ | : ಪ್ರ.ದ.ಸ. |
| ವಾಸ | : ದೇವಳಿವಾಡಾ, ಕಾರವಾರ |

**ದಿನಾಂಕಃ 14-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು 10 ವರ್ಷದಿಂದ ಸೇಲ್ಸ್ ಟಾಕ್ಸ್ ಇಲಾಖೆಯಲ್ಲಿ ಕಾರವಾರದಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ . ದಿನಾಂಕಃ 16.09.2013 ರಂದು ಲೋಕಾಯುಕ್ತ ಠಾಣೆಯಿಂದ ಪಂಚರಾಗಿ ಸಹಕರಿಸುವಂತೆ ನನ್ನ ಮೇಲಾಧಿಕಾರಿಯವರಿಗೆ ಸಿಬ್ಬಂದಿಯೊಬ್ಬರನ್ನು ಕಳುಹಿಸುವಂತೆ ಪತ್ರ ಬಂದಿತ್ತು . ನನ್ನ ಮೇಲಾಧಿಕಾರಿಯವರು ನನ್ನನ್ನು ಪಂಚರನ್ನಾಗಿ ಹೋಗುವಂತೆ ನೇಮಕ ಮಾಡಿ ಕಳುಹಿಸಿದರು . ನಾನು ಕಾರವಾರದ ಲೋಕಾಯುಕ್ತ ಕಚೇರಿಯಲ್ಲಿ ಆರಕ್ಷಕ ಉಪಾಧೀಕ್ಷಕರ ಮುಂದೆ ಹೋಗಿ ಹಾಜರಾದೆ . ಅಲ್ಲಿ ಇನ್ನೊಬ್ಬ ಪಂಚರಾಗಿ ದಿವಾಕರ ಕುಲರ್ಕಣಿ ಎನ್ನುವವರು ಹಾಜರಿದ್ದರು . ಅವರು ಹೆಸ್ಕಾಂ ಸಂಸ್ಥೆಯಿಂದ ಬಂದಿದ್ದರು . ಅಲ್ಲಿ ಇದ್ದ ಫಿರ್ಯಾದುದಾರರನ್ನು ಪರಿಚಯ ಮಾಡಿಕೊಟ್ಟರು . ಫಿರ್ಯಾದುದಾರರಿಂದ ಅಕ್ಷರ ದಾಸೋಹ ಜಿಲ್ಲಾ ಪಂಚಾಯತ್, ಕುಮಟಾ ಕಚೇರಿಯ ಸಹಾಯಕ ನಿರ್ದೇಶಕರಾದ ಗಣೇಶ ಅನಂತ ನಾಯ್ಕ ಎನ್ನುವವರು ರೂ . 5,000/- ಲಂಚವನ್ನು ಕೇಳುತ್ತಿರುವುದಾಗಿ ತಿಳಿಸಿದರು . ನಂತರ ಲೋಕಾಯುಕ್ತ ಉಪಾಧೀಕ್ಷಕರು ಫಿರ್ಯಾದುದಾರರು ಕೊಟ್ಟಿದ್ದ ದೂರನ್ನು ನಮಗೆ ಓದಿ ಹೇಳಿ ಅದಕ್ಕೆ ರುಜು ಮಾಡುವಂತೆ ಕೇಳಿದರು . ನಾವು ರುಜು ಮಾಡಿದ್ದೇವೆ . ನಂತರ ತನಿಖೆಗೆ ಸಹಕರಿಸಬೇಕು ಎಂದು ತಿಳಿಸಿದರು . ನಂತರ ಲೋಕಾಯುಕ್ತ ಪೊಲೀಸ್ ನವರು ರೂ . 3,000/- ಅನ್ನು ನನ್ನ ಕೈಗೆ ಕೊಟ್ಟು ಎಣಿಸುವಂತೆ ಕೇಳಿದರು . ಅದರಲ್ಲಿ ರೂ. 1,000/- ಎರಡು ನೋಟು ಇತ್ತು. ರೂ. 500/- ಎರಡು ನೋಟು ಇದ್ದವು . ಆ ನೋಟುಗಳ ಸಂಖ್ಯೆಗಳನ್ನು ಓದಿ ತಿಳಿಸುವಂತೆ ಕೇಳಿದರು . ನಾನು ಅದನ್ನು ಓದಿ ಹೇಳಿದೆ . ನಂತರ ಲೋಕಾಯುಕ್ತ ಸಿಬ್ಬಂದಿಯಿಂದ ಉಪಾಧೀಕ್ಷಕರು ಆ

ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಸವರಿಸಿದರು . ಆ ಫಿನಾಪ್ತಲಿನ್ ಪುಡಿಯಿಂದ ಸ್ವಲ್ಪ ಪುಡಿಯನ್ನು ಮಾದರಿಯನ್ನಾಗಿ ತೆಗೆದು ಅದನ್ನು ಎ ಎಂಬ ಅಕ್ಷರದಿಂದ ಮೊಹರು ಮಾಡಿ ಸೀಲ್ ಮಾಡಿದರು . ನನಗೆ ಅದರ ಮೇಲೆ ಅಂಟಿಸಿದ ಚೀಟಿಗೆ ರುಜು ಪಡೆದರು . ನಂತರ ಭಟ್ಟಿ ಇಳಿಸಿದ ನೀರನ್ನು ತೆಗೆದುಕೊಂಡು ಅದರಲ್ಲಿ ಸೋಡಿಯಂ ಕಾರ್ಬೋನೇಟ್ ಪುಡಿ ಹಾಕಿ ಧ್ರಾವಣ ತಯಾರಿಸಿದರು . ನನಗೆ ಫಿನಾಪ್ತಲಿನ್ ಪುಡಿ ಸವರಿದ ನೋಟುಗಳನ್ನು ಕೊಟ್ಟು ಅದನ್ನು ಪುನಃ ಎಣಿಸುವಂತೆ ಹೇಳಿದರು . ಆ ನೋಟುಗಳನ್ನು ನನ್ನಿಂದ ಫಿರ್ಯಾದುದಾರರ ಅಂಗಿಯ ಕಿಸೆಯಲ್ಲಿ ಇಡಿಸಿದರು . ನಂತರ ನನ್ನ ಕೈ ಬೆರಳುಗಳನ್ನು ತಯಾರಿಸಿದ್ದ ಧ್ರಾವಣದಲ್ಲಿ ಅದ್ದಿಸಿದರು . ಆಗ ನಾನು ಬೆರಳನ್ನು ಅದ್ದಿದಾಗ ಮೊದಲು ಬಣ್ಣ ಇಲ್ಲದಿದ್ದ ಆ ಧ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು . ನಂತರ ಆ ಧ್ರಾವಣವನ್ನು ಒಂದು ಬಾಟಲಿನಲ್ಲಿ ಹಾಕಿ ಅದಕ್ಕೆ ಎ ಎಂಬ ಅಕ್ಷರದ ಮೊಹರನ್ನು ಹಾಕಿ ಸೀಲು ಮಾಡಿದರು . ಅಲ್ಲಿ ಛಾಯಾ ಚಿತ್ರಗಳನ್ನು ಪೊಲೀಸ್ ನವರು ತೆಗೆದರು . ಅಲ್ಲಿ ನಾಲ್ಕು ಬಾಟಲ್ ಗಳನ್ನು ಜಪ್ತು ಮಾಡಿದರು . ಯಾವ ಉದ್ದೇಶಕ್ಕೆ ಅದನ್ನು ಜಪ್ತು ಮಾಡಿದರು ಎಂದು ನನಗೆ ಗೊತ್ತು . ಆ ಬಾಟಲುಗಳನ್ನು ನೋಡಿದರೆ ಗುರುತಿಸುತ್ತೇನೆ. ನಂತರ ಕುಮಟಾಕ್ಕೆ ಟ್ರ್ಯಾಪ್ ಮಾಡಲು ಹೋಗಬೇಕು ಎಂದು ಲೋಕಾಯುಕ್ತ ಉಪಾಧೀಕ್ಷಕರು ತಿಳಿಸಿದರು . ಅದಕ್ಕೆ ಮೊದಲು ಒಂದು ಮೈಕ್ರೋ ಪೋನನ್ನು ಅವರು ಫಿರ್ಯಾದುದಾರರಿಗೆ ಕೊಟ್ಟರು . ನನ್ನನ್ನು ಪಂಚ ಒಂದು ಎಂದು ನೇಮಕ ಮಾಡಿ ನಾವು ಎಲ್ಲಿ ಹೋಗಬೇಕು ಹೇಗೆ ವರ್ತಿಸಬೇಕು ಎಂದು ಮಾಹಿತಿಯನ್ನು ನೀಡಿದರು .

2. ನಂತರ ಉಪಾಧೀಕ್ಷಕರು, ಅವರ ಸಿಬ್ಬಂದಿ, ನಾನು, ಇನ್ನೊಬ್ಬ ಪಂಚ ಮತ್ತು ಫಿರ್ಯಾದಿ ಅವರ ಸರ್ಕಾರಿ ವಾಹನದಲ್ಲಿ ಕುಮಟಾಕ್ಕೆ ಹೋದೆವು . ನಂತರ ಉಪಾಧೀಕ್ಷಕರ ಸೂಚನೆ ಮೇರೆಗೆ ಕುಮಟಾದಲ್ಲಿ ಗಿಬ್ ಹೈಸ್ಕೂಲ್ ಸರ್ಕಲ್ ಬಳಿ ಇಳಿದೆವು . ಅಲ್ಲಿ ಪುನಃ ಉಪಾಧೀಕ್ಷಕರು ನಮಗೆ ಎಲ್ಲರಿಗೂ ನಾವು ಯಾವ ರೀತಿ ಹೋಗಬೇಕು ನಡೆದುಕೊಳ್ಳಬೇಕು ಏನು ಮಾಡಬೇಕು ಎಂದು ಸೂಚನೆಗಳನ್ನು ನೀಡಿದರು . ನಂತರ ಫಿರ್ಯಾದಿಯವರು ಆರೋಪಿತನಿಗೆ ಪೋನ್ ಮಾಡಿದ . ಆಗ ಆರೋಪಿ ತಾನು ತಾಲೂಕು ಪಂಚಾಯತಿ ಕಚೇರಿಯಲ್ಲಿ ಇರುವುದಾಗಿ ತಿಳಿಸಿದ . ನಂತರ ನಾನು ಮತ್ತು ಫಿರ್ಯಾದಿ ನಡೆದುಕೊಂಡು ತಾಲೂಕು ಪಂಚಾಯತಿ ಕಚೇರಿ ಒಳಗಡೆ ಹೋದೆವು . ಅಲ್ಲಿ ಆರೋಪಿ ಒಂದು ಕುರ್ಚಿಯಲ್ಲಿ ಕುಳಿತಿದ್ದ . ಫಿರ್ಯಾದುದಾರರು ನನಗೆ ಸಣ್ಣ ಧ್ವನಿಯಲ್ಲಿ ಆತನೇ ಆರೋಪಿ ಗಣೇಶ ಅನಂತ ನಾಯ್ಕ ಎಂದು ತಿಳಿಸಿದ . ಈ ದಿನ ಆರೋಪಿ ನ್ಯಾಯಾಲಯದ ಕಟಕಟೆಯಲ್ಲಿ ಹಾಜರಿದ್ದಾನೆ .

ನಾನು ಆರೋಪಿಯನ್ನು ಗುರುತಿಸಿರುತ್ತೇನೆ . ನಂತರ ಆರೋಪಿ ಮತ್ತು ಫಿರ್ಯಾದಿ ಪಕ್ಕದಲ್ಲಿ ಇದ್ದ ಒಂದು ಕೋಣೆಗೆ ಹೋದರು . ಅಲ್ಲಿ ದುಡ್ಡಿನ ಬಗ್ಗೆ ಸ್ವಲ್ಪ ಮಾತನಾಡಿ ಹೊರಗಡೆ ಬಂದು ಸೈಕಲ್ ಸ್ಟ್ಯಾಂಡ್ ಬಳಿ ಇಬ್ಬರೂ ಹೋದರು . ನಾನು ಹೊರಗಡೆ ಬಾಗಿಲಿನ ಬಳಿ ಬಂದು ಅಲ್ಲಿ ಇದ್ದೆ. ನಾನು ಗಮನಿಸುತ್ತಾ ಇದ್ದೆ. ಆಗ ಫಿರ್ಯಾದುದಾರರು ನಾನು ಕೊಟ್ಟಿದ್ದ ನೋಟುಗಳನ್ನು ಕೈಯಲ್ಲಿ ತೆಗೆದು ಆರೋಪಿ ಕೈಗೆ ಕೊಟ್ಟರು . ಆರೋಪಿ ಆ ನೋಟುಗಳನ್ನು ತೆಗೆದುಕೊಂಡು ಎರಡೂ ಕೈಯಿಂದ ಎಣಿಸಿ ಆರೋಪಿ ತನ್ನ ಪ್ಯಾಂಟ್ ನ ಬಲ ಕಿಸೆಯಲ್ಲಿ ಇಟ್ಟುಕೊಂಡ . ಹಣವನ್ನು ಆ ರೀತಿ ಕಿಸೆಯಲ್ಲಿ ಇಟ್ಟು ತಕ್ಷಣವೇ ಆರೋಪಿ ತನ್ನ ಬೈಕ್ ನಲ್ಲಿ ತಾಲೂಕು ಪಂಚಾಯತಿ ಕಚೇರಿ ಆವರಣದಿಂದ ಹೊರಗಡೆ ಹೊರಟು ಹೋದರು . ಅಷ್ಟರಲ್ಲಿ ಫಿರ್ಯಾದುದಾರರು ಕರವಸ್ತ್ರದಿಂದ ತನ್ನ ಮುಖ ಒರೆಸಿಕೊಂಡು ಉಪಾಧೀಕ್ಷಕರಿಗೆ ಸನ್ನೆ ನೀಡಿದರು . ನಂತರ ಆರೋಪಿಯನ್ನು ಹುಡುಕಲು ಇಡೀ ಕುಮಟಾ ಪೂರ್ತಿ ನಾವೆಲ್ಲಾ ಲೋಕಾಯುಕ್ತ ಜೀಪಿನಲ್ಲಿ ಹೋದೆವು . ಕೊನೆಯದಾಗಿ ಶಾಂತಿಕಾ ಪರಮೇಶ್ವರ ದೇವಸ್ಥಾನದ ರಸ್ತೆಯಲ್ಲಿ ಆರೋಪಿ ಸಿಕ್ಕಿದರು . ಅಲ್ಲಿ ಉಪಾಧೀಕ್ಷಕರು ಮತ್ತು ಅವರ ಸಿಬ್ಬಂದಿ ಆರೋಪಿಯನ್ನು ಹಿಡಿದ ತಕ್ಷಣ ಆರೋಪಿ ತನ್ನ ಪ್ಯಾಂಟಿನ ಬಲಜೇಬಿನಿಂದ ಹಣ ತೆಗೆದು ಅಲ್ಲಿ ಇದ್ದ ಗಿಡಗಂಟೆ ಇರುವ ಜಾಗದಲ್ಲಿ ಆ ಹಣವನ್ನು ಬಿಸಾಡಿದ . ನಂತರ ಉಪಾಧೀಕ್ಷಕರು ಅವರ ಪರಿಚಯವನ್ನು ಆರೋಪಿಗೆ ಹೇಳಿದರು . ಆರೋಪಿಗೆ ಹಣ ಬಿಸಾಡಿದ್ದ ಜಾಗ ತೋರಿಸುವಂತೆ ಕೇಳಿದರು . ಆಗ ಛಾಯಾ ಚಿತ್ರಗಳನ್ನೆಲ್ಲಾ ತೆಗೆಸಿದರು . ಆರೋಪಿ ಆ ರೀತಿ ಹಣ ಎಸೆದ ಜಾಗಕ್ಕೆ ನಾವೆಲ್ಲಾ ಹೋಗಿದ್ದೆವು . ಅಲ್ಲಿ ಕತ್ತಲೆಯಾಗಿದ್ದರಿಂದ ಮತ್ತು ರಸ್ತೆ ಕಿರುದಾಗಿದ್ದರಿಂದ ಜನ ಸಂದಣಿ ಇದ್ದುದ್ದರಿಂದ ಅಲ್ಲಿ ಪಂಚನಾಮೆ ಮಾಡಲು ಸಾಧ್ಯವಾಗಲಿಲ್ಲ . ಆರೋಪಿ ಅಲ್ಲಿ ಬಿಸಾಡಿದ್ದ ಹಣವನ್ನು ತೋರಿಸಿದ . ಆ ಹಣವನ್ನು ನಾನೇ ಹೋಗಿ ಎತ್ತಿಕೊಂಡೆ ಮತ್ತು ಎಣಿಸಿದೆ. ಅದು ರೂ. 3,000/- ಇತ್ತು. ಆ ನೋಟುಗಳು ತಾಳೆಯಾದವು . ಆಗ ಉಪಾಧೀಕ್ಷಕರು ಆ ನೋಟುಗಳನ್ನು ಜಪ್ತಿ ಮಾಡಿದರು . ಅಲ್ಲಿಂದ ಆರೋಪಿಯನ್ನು ಕರೆದುಕೊಂಡು ನಾವು ಕುಮಟಾದ ಪ್ರವಾಸಿ ಮಂದಿರಕ್ಕೆ ಹೋದೆವು . ಪ್ರವಾಸಿ ಮಂದಿರದಲ್ಲಿ ಆರೋಪಿಯ ಎರಡೂ ಕೈ ಬೆರಳುಗಳನ್ನು ಅಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಅದರಲ್ಲಿ ಪ್ರತ್ಯೇಕವಾಗಿ ಬಲಗೈ ಬೆರಳು ಮತ್ತು ಎಡಗೈ ಬೆರಳನ್ನು ಅದ್ದಿಸಿದರು . ಆಗ ಎರಡೂ ಕೈ ಅದ್ದಿದ ಆ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು . ಆ ದ್ರಾವಣವನ್ನು ಪ್ರತ್ಯೇಕವಾಗಿ ಎರಡು ಬಾಟಲುಗಳಲ್ಲಿ ಹಾಕಿ ಸೀಲು ಮಾಡಿದರು . ಅದಕ್ಕೆ ಅಂಟಿಸಿದ ಚೀಟಿಗಳಿಗೆ ನಾನು ರುಜು ಮಾಡಿರುತ್ತೇನೆ . ಆ

ಬಾಟಲಿಗಳನ್ನು ನೋಡಿದರೆ ಗುರುತಿಸುತ್ತೇನೆ . ಆರೋಪಿಯು ಉಪಾಧೀಕ್ಷಕರಿಗೆ ಫಿರ್ಯಾದುದಾರರು ತನ್ನಿಂದ ಸಾಲ ಪಡೆದಿದ್ದರು ಆ ಹಣವನ್ನು ವಾಪಸ್ಸು ಮಾಡಿದರು ಎಂದು ಲಿಖಿತವಾಗಿ ವಿವರಣೆಯನ್ನು ನೀಡಿದರು . ಅದನ್ನು ಉಪಾಧೀಕ್ಷಕರು ನಮಗೆ ಓದಿ ಹೇಳಿದರು . ಅದಕ್ಕೆ ನಾವು ಪಂಚರು ರುಜು ಮಾಡಿದೆವು . ನಾನು ಉಪಾಧೀಕ್ಷಕರಿಗೆ ಮೌಖಿಕವಾಗಿ ಆರೋಪಿ ಹಣ ತೆಗೆದುಕೊಂಡಿದ್ದು ನಿಜ ಇದೆ ನಾನು ಅದನ್ನು ನೋಡಿದ್ದೇನೆ ಎಂದು ಹೇಳಿದೆ . ನಂತರ ಆರೋಪಿ ಕಚೇರಿಯಲ್ಲಿ ಫಿರ್ಯಾದುದಾರರಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಪರಿಶೀಲಿಸಿ ಜಪ್ತು ಮಾಡುವುದಕ್ಕಾಗಿ ಆರೋಪಿ ಕಚೇರಿಗೆ ವಾಸಪ್ತು ಹೋದೆವು . ಅಲ್ಲಿ ಆರೋಪಿಯ ಮೇಲಾಧಿಕಾರಿ ಬಂದರು . ಲೋಕಾಯುಕ್ತ ಉಪಾಧೀಕ್ಷಕರು ಪ್ರಕರಣದ ವಿಚಾರವನ್ನೆಲ್ಲಾ ಅವರಿಗೆ ವಿವರಿಸಿ ಹೇಳಿದರು . ನಂತರ ಆರೋಪಿಯು ಫಿರ್ಯಾದುದಾರರಿಗೆ ಸಂಬಂಧಪಟ್ಟ ದಾಖಲಾತಿಗಳನ್ನೆಲ್ಲಾ ಹಾಜರು ಪಡಿಸಿದರು . ಆಗ ಆ ಮೂಲ ದಾಖಲಾತಿಗಳನ್ನು ಫಿರ್ಯಾದುದಾರರ ಕೈಗೆ ಕೊಟ್ಟು ಅದರ ನೆರಳಚ್ಚು ಪ್ರತಿಗಳನ್ನು ಜಪ್ತು ಮಾಡಿದರು . ಮೂಲ ದಾಖಲಾತಿಗಳನ್ನು ಬಹುಶಃ ಕಚೇರಿಯಲ್ಲಿ ಅಧಿಕಾರಿಯವರಿಗೆ ಮುಂದಿನ ಕ್ರಮಕ್ಕೆ ಕೊಟ್ಟಿರುತ್ತಾರೆ . ಅಲ್ಲಿ ಸುಮಾರು ಒಂದರಿಂದ ಒಂದುಕಾಲು ಗಂಟೆ ಸಮಯ ಹಿಡಿಯಿತು . ನಂತರ ಪ್ರವಾಸಿ ಮಂದಿರಕ್ಕೆ ವಾಪಸ್ಸು ಬಂದೆವು . ಅಲ್ಲಿ ಬೆರಳಚ್ಚು ಮಾಡಿ ಪಂಚನಾಮೆಯನ್ನು ತಯಾರಿಸಿದರು . ಆ ಪಂಚನಾಮೆಗೆ ನಾವು ಸಹಿ ಮಾಡಿದೆವು . ನಂತರ ಕಾರವಾರಕ್ಕೆ ಉಪಾಧೀಕ್ಷಕರು, ಪಂಚರು, ಆರೋಪಿ, ಫಿರ್ಯಾದಿ ವಾಪಸ್ಸು ಬಂದೆವು. ನಾನು ಪಂಚನಾಮೆ ಮತ್ತು ಅದರಲ್ಲಿ ನನ್ನ ರುಜುವನ್ನು ನೋಡಿದರೆ ಗುರುತಿಸುತ್ತೇನೆ . ನಂತರ ಲೋಕಾಯುಕ್ತ ಜೀಪಿನಲ್ಲಿ ನನ್ನನ್ನು ವಾಪಸ್ಸು ಲೋಕಾಯುಕ್ತ ಠಾಣೆ ಬಳಿ ಬಿಟ್ಟಿರುತ್ತಾರೆ . ನಾವೆಲ್ಲರೂ ಸೇರಿ ಅಲ್ಲಿಗೆ ಬಂದಿರುತ್ತೇವೆ . ಆರೋಪಿಯನ್ನು ಲೋಕಾಯುಕ್ತ ಪೊಲೀಸ್ ನವರು ವಶಕ್ಕೆ ತೆಗೆದುಕೊಂಡರು . ಆ ದಿನ ಲೋಕಾಯುಕ್ತ ಕಚೇರಿಯಲ್ಲಿ ಫಿನಾಪ್ತಲಿನ್ ಪುಡಿ ಸವರಿ ಫಿರ್ಯಾದುದಾರರಿಗೆ ನೀಡಿದ ಮತ್ತು ನಂತರ ಫಿರ್ಯಾದುದಾರರಿಂದ ಆರೋಪಿ ಸ್ವೀಕರಿಸಿದ ನಂತರ ಆರೋಪಿಯಿಂದ ಜಪ್ತು ಮಾಡಿದ ಹಣವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಈಗ ಸ್ವತಃ ಹೇಳುತ್ತಾರೆ ಕುಮಟಾದ ಪ್ರವಾಸಿ ಮಂದಿರದಲ್ಲಿ ಪಂಚನಾಮೆ ಕಾಲದಲ್ಲಿ ಆರೋಪಿಗೆ ಬೇರೆ ಪ್ಯಾಂಟು ನೀಡಿ ಅವನು ಧರಿಸಿದ್ದ ಪ್ಯಾಂಟನ್ನು ತೆಗೆಸಿ ಅದರ ಬಲಕಿಸೆಯ ಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದರು ಆಗ ಅದು ಸ್ವಲ್ಪ ಗುಲಾಬಿ ಬಣ್ಣಕ್ಕೆ ತಿರುಗಿತು . ಆ ಪ್ಯಾಂಟನ್ನು ಸಹ ಲೋಕಾಯುಕ್ತ ಪೊಲೀಸ್ ನವರು ಸೀಲು ಮಾಡಿ ಜಪ್ತು

ಮಾಡಿದರು . ಆ ಪ್ಯಾಂಟನ್ನು ನೋಡಿದರೆ ನಾನು ಗುರುತಿಸುತ್ತೇನೆ . ನಾನು ವಾಪಸ್ಸು ಲೋಕಾಯುಕ್ತ ಕಚೇರಿಗೆ ಬಂದ ಮೇಲೆ ಅಲ್ಲಿಂದ ಮನೆಗೆ ಹೋದೆ .

3. ಪುನಃ ದಿನಾಂಕಃ 04.12.2013 ರಂದು ನನಗೆ ಸ್ಥಳದ ನಕಾಶೆ ತಯಾರು ಮಾಡಬೇಕಾಗಿದೆ ಎಂದು ಲೋಕೋಪಯೋಗಿ ಇಲಾಖೆಯ ಅಭಿಯಂತರರು ಎಂ .ವಿ. ಹೆಗಡೆ ರವರ ಜೊತೆ ಕರೆದುಕೊಂಡು ಹೋಗಿ ಅಲ್ಲಿ ಜಾಗದ ನಕಾಶೆ ತಯಾರಿಸಿದರು . ದಿನಾಂಕಃ 08.01.2014 ರಂದು ಪುನಃ ಲೋಕಾಯುಕ್ತ ಕಚೇರಿಗೆ ಕರೆಯಿಸಿದ್ದರು . ವೈಸ್ ರೆಕಾರ್ಡರಿನಲ್ಲಿ ಆಗಿದ್ದ ಧ್ವನಿ ಮುದ್ರಣದಲ್ಲಿ ಗದ್ದಲ ಜಾಸ್ತಿ ಇದ್ದುದ್ದರಿಂದ ಫಿರ್ಯಾದುದಾರರು ಮೊಬೈಲ್ ಫೋನ್ ನಲ್ಲಿ ಮಾಡಿಕೊಂಡಿದ್ದ ರೆಕಾರ್ಡಿಂಗನ್ನು ಸಿ .ಡಿ. ಗೆ ಪರಿವರ್ತಿಸಿ ಅದರಲ್ಲಿದ್ದ ಸಂಭಾಷಣೆಯನ್ನು ಕೇಳಿಸಿದರು . ಆ ಸಿ.ಡಿ.ಯನ್ನು ಜಪ್ತು ಮಾಡಿದರು . ಅದರಲ್ಲಿದ್ದ ಸಂಭಾಷಣೆಯನ್ನು ಬೆರಳಚ್ಚು ಮಾಡಿಸಿದರು . ಅದಕ್ಕೆ ನನ್ನ ರುಜುವನ್ನು ಪಡೆದಿರುತ್ತಾರೆ . ಆ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ . ಅದಕ್ಕೆ ಉಪಾಧೀಕ್ಷಕರು ಸಹ ಸಹಿ ಮಾಡಿದ್ದಾರೆ.

4. ಈಗ ನಾನು ಪ್ರಾಯೋಗಿಕ ಪಂಚನಾಮೆ ನೋಡುತ್ತಿದ್ದು ಅದರಲ್ಲಿ ನನ್ನ ರುಜು ಇದೆ . ಅದರಲ್ಲಿ ಪ್ರತಿ ಪುಟದಲ್ಲಿ ನನ್ನ ರುಜು ಇದೆ . ಆ ಪಂಚನಾಮೆಯನ್ನು ನಿ.ಪಿ. 1 ಎಂದು ಅದರಲ್ಲಿ ಕೊನೆಯ ಪುಟದಲ್ಲಿ ಸಾಕ್ಷಿಯ ರುಜುವನ್ನು ನಿ .ಪಿ.1(ಎ) ಎಂದು ಗುರುತಿಸಲಾಯಿತು. ಈಗ ನಾನು ಟ್ರ್ಯಾಪ್ ಪಂಚನಾಮೆಯನ್ನು ನೋಡಿರುತ್ತೇನೆ . ಅದರಲ್ಲಿ ಪ್ರತಿ ಪುಟದಲ್ಲಿ ನನ್ನ ರುಜು ಇದೆ . ಆ ಪಂಚನಾಮೆಯನ್ನು ನಿ.ಪಿ. 2 ಎಂದು ಮತ್ತು ಕೊನೆಯ ಪುಟದಲ್ಲಿ ಸಾಕ್ಷಿಯ ರುಜುವನ್ನು ನಿ .ಪಿ.2(ಎ) ಎಂದು ಗುರುತಿಸಲಾಯಿತು . ಫಿರ್ಯಾದನ್ನು ನನಗೆ ಓದಿ ಹೇಳಿದ್ದು ನಾನು ಅದನ್ನು ನೋಡಿದರೆ ಗುರುತಿಸುತ್ತೇನೆ . ನಿ.ಪಿ. 3 ಆ ಫಿರ್ಯಾದು ಆಗಿದೆ (ಆರೋಪಿ ಪರ ನ್ಯಾಯವಾದಿಗಳು ಸಾಕ್ಷಿಯು ಆ ದಾಖಲಾತಿಯ ಕರ್ತ ಅಲ್ಲ ಆದ್ದರಿಂದ ಅದನ್ನು ಗುರುತಿಸಲು ಬರುವುದಿಲ್ಲ ಎಂದು ತಕರಾರು ಮಾಡಿದ್ದಾರೆ . ತಕರಾರಿಗೊಳಪಟ್ಟು ಅದನ್ನು ಗುರುತಿಸಲಾಯಿತು ). ಈಗ ನೋಡಿದ ದಾಖಲಾತಿ ಸಿ.ಡಿ. ಜಪ್ತು ಮಾಡಿದಾಗ ಬರೆದ ಪಂಚನಾಮೆಯಾಗಿದೆ. ಅದರಲ್ಲಿ ಪ್ರತಿ ಪುಟದಲ್ಲಿ ನಾನು ರುಜು ಮಾಡಿದ್ದೇನೆ . ಆ ಪಂಚನಾಮೆಯನ್ನು ನಿ.ಪಿ. 4 ಎಂದು ಅದರಲ್ಲಿ ಸಾಕ್ಷಿಯ ರುಜುವನ್ನು ನಿ .ಪಿ.4(ಎ) ಎಂದು ಗುರುತಿಸಲಾಯಿತು . ಆರೋಪಿ ಉಪಾಧೀಕ್ಷಕರಿಗೆ ನೀಡಿದ ಲಿಖಿತ ವಿವರಣೆಯನ್ನು ನೋಡಿದರೆ ನಾನು ಗುರುತಿಸುತ್ತೇನೆ. ಈಗ ನೋಡಿದ ದಾಖಲಾತಿ ಆರೋಪಿ ನೀಡಿದ ಸದರಿ

ಲಿಖಿತ ವಿವರಣೆ ಆಗಿದೆ. ಅದರಲ್ಲಿ ನನ್ನ ರುಜು ಇದೆ . ಆ ದಾಖಲಾತಿಯನ್ನು ನಿ.ಪಿ. 5 ಎಂದು ಗುರುತಿಸಲಾಯಿತು . ಅದರಲ್ಲಿ ಸಾಕ್ಷಿಯ ರುಜುವನ್ನು ನಿ .ಪಿ. 5(ಎ) ಎಂದು ಗುರುತಿಸಲಾಯಿತು . ನಿ.ಪಿ.5(ಬಿ) ಆರೋಪಿಯ ರುಜು ಆಗಿದೆ . (ಆರೋಪಿ ಪರ ನ್ಯಾಯವಾದಿಗಳು ಆರೋಪಿ ನೀಡಿದ್ದಾನೆ ಎಂದು ಹೇಳಿರುವ ಆ ವಿವರಣೆ ಸಾಕ್ಷ್ಯದಲ್ಲಿ ಅಂಗೀಕರಿಸಲು ಬರುವುದಿಲ್ಲ ಎಂದು ತಕರಾರು ಮಾಡಿದ್ದಾರೆ . ತಕರಾರಿಗೊಳಪಟ್ಟು ನಿಶಾನೆ ಮಾಡಲಾಗಿದೆ ). ಈಗ ನೋಡಿದ 13 ಛಾಯಾ ಚಿತ್ರಗಳನ್ನು ಲೋಕಾಯುಕ್ತ ಕಚೇರಿಯಲ್ಲಿ ತೆಗೆಯಲಾಗಿರುತ್ತದೆ . ಅವುಗಳನ್ನು ನಿ.ಪಿ. 6 ರಿಂದ 18 ಎಂದು ಗುರುತಿಸಲಾಯಿತು . ಆ ಛಾಯಾ ಚಿತ್ರಗಳು ಇರುವ ಪ್ರತಿ ಪುಟದಲ್ಲಿ ನಾನು ರುಜು ಮಾಡಿದ್ದೇನೆ . ನಿ.ಪಿ.7(ಎ), 9(ಎ), 11(ಎ), 13(ಎ), 15(ಎ), 17(ಎ), 18(ಎ) ನನ್ನ ರುಜುಗಳಾಗಿವೆ. ಈಗ ನೋಡಿದ 18 ಛಾಯಾ ಚಿತ್ರಗಳನ್ನು ಟ್ರ್ಯಾಪ್ ಕಾಲದಲ್ಲಿ ಕುಮಟಾದಲ್ಲಿ ತೆಗೆಯಲಾಗಿದೆ . ಆ ಪೈಕಿ ಕೆಲವು ಛಾಯಾ ಚಿತ್ರಗಳಲ್ಲಿ ನಾನು ಇದ್ದೇನೆ ಹಾಗೂ ಇನ್ನೊಬ್ಬ ಪಂಚ ಇದ್ದಾನೆ . ಆ ಛಾಯಾ ಚಿತ್ರಗಳು ಇರುವ ಪ್ರತಿ ಹಾಳೆಗೆ ನಾನು ರುಜು ಮಾಡಿದ್ದೇನೆ . ನಿ.ಪಿ. 19 ರಿಂದ 36 ಆ ಛಾಯಾ ಚಿತ್ರಗಳು ಆಗಿವೆ. ನಿ.ಪಿ. 20(ಎ), 22(ಎ), 24(ಎ), 26(ಎ), 28(ಎ), 30(ಎ), 32(ಎ), 34(ಎ) ಮತ್ತು 36(ಎ) ನನ್ನ ರುಜುಗಳಾಗಿವೆ . ಈಗ ಮೊಹರು ಮಾಡಿದ ಲಕೋಟೆಯನ್ನು ಅದಕ್ಕೆ ಹಾಕಿರುವ ಮೊಹರು ಸುಸ್ಥಿತಿಯಲ್ಲಿರುವುದನ್ನು ಆರೋಪಿ ಪರ ವಕೀಲರ ಸಮಕ್ಷಮದಲ್ಲಿ ಖಾತ್ರಿ ಮಾಡಿಕೊಂಡು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಗಿರುತ್ತದೆ . ಅದರಲ್ಲಿ ಜಪ್ತು ಮಾಡಿರುವ ಹಣ ಇರುತ್ತದೆ . ಈಗ ನಾನು ರೂ. 3,000/- ನೋಟುಗಳನ್ನು ನೋಡಿದ್ದು ಅದರಲ್ಲಿ ರೂ. 1,000/- ಎರಡು ಮತ್ತು ರೂ . 500/- ರ ಎರಡು ನೋಟು ಇದ್ದು ಅವುಗಳು ಆರೋಪಿ ಕಡೆಯಿಂದ ಕುಮಟಾದಲ್ಲಿ ಟ್ರ್ಯಾಪ್ ಸಮಯದಲ್ಲಿ ಜಪ್ತು ಮಾಡಲಾಗಿದೆ . ಆರೋಪಿಗೆ ಫಿರ್ಯಾದಿ ಕೊಟ್ಟಿದ್ದ ನೋಟು ಆಗಿರುತ್ತವೆ . ಆ ನೋಟುಗಳನ್ನು ಒಟ್ಟಾರೆಯಾಗಿ ಲಕೋಟೆ ಸಮೇತವಾಗಿ ಮು .ಮಾ. 1 ಎಂದು ಗುರುತಿಸಲಾಯಿತು . ಮು.ಮಾ.1(ಎ) ಲಕೋಟೆಯ ಮೇಲೆ ಅಂಟಿಸಿರುವ ಚೀಟಿಗೆ ಹಾಕಿರುವ ನನ್ನ ರುಜು ಆಗಿದೆ . ಪಂಚನಾಮೆ ಸಮಯಗಳಲ್ಲಿ ಜಪ್ತು ಮಾಡಿರುವ ಧ್ರಾವಣದ ಬಾಟಲುಗಳನ್ನು ನೋಡಿದರೆ ಗುರುತಿಸುತ್ತೇನೆ . ಈಗ ನೋಡಿದ ಆರ್ಟಿಕಲ್ ನಂ. 1 ಲಕೋಟೆಗೆ ಅಂಟಿಸಿರುವ ಚೀಟಿಯಲ್ಲಿ ನನ್ನ ರುಜು ಇದೆ. ಅದರಲ್ಲಿ ಮಾದರಿಗಾಗಿ ತೆಗೆದ ಫಿನಾಪ್ತಲಿನ್ ಪುಡಿ ಇದೆ . ಮು.ಮಾ. 2 ಎಂದು ಅದನ್ನು ಗುರುತಿಸಲಾಯಿತು . ಸಾಕ್ಷಿಯ ರುಜುವನ್ನು ಮು.ಮಾ. 2(ಎ) ಎಂದು ಗುರುತಿಸಲಾಯಿತು .

ಈಗ ನೋಡಿದ ಬಾಟಲ್ ಮೇಲೆ ಇರುವ ಚೀಟಿಯಲ್ಲಿ ನನ್ನ ರುಜು ಇದೆ . ಡಿಸ್ಟಿಲ್ಡ್ ವಾಟರನ್ನು ಮಾದರಿಗಾಗಿ ಅದರಲ್ಲಿ ಅಮಾನತ್ತು ಮಾಡಲಾಗಿದೆ . ಅದನ್ನು ಮು .ಮಾ.3 ಎಂದು ಗುರುತಿಸಲಾಯಿತು . ಸಾಕ್ಷಿಯ ರುಜುವನ್ನು ಮು.ಮಾ.3(ಎ) ಎಂದು ಗುರುತಿಸಲಾಯಿತು . ಈಗ ನೋಡಿದ ಮೊಹರು ಆಗಿರುವ ಲಕೋಟೆಯಲ್ಲಿ ಮಾದರಿಗಾಗಿ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಜಪ್ತು ಮಾಡಲಾಗಿದೆ . ಅದಕ್ಕೆ ಅಂಟಿಸಿರುವ ಚೀಟಿ ಮೇಲೆ ನನ್ನ ರುಜು ಇದೆ . ಆ ಲಕೋಟೆಯನ್ನು ಮು .ಮಾ. 4 ಎಂದು ಸಾಕ್ಷಿಯ ರುಜುವನ್ನು ಮು.ಮಾ.4(ಎ) ಎಂದು ಗುರುತಿಸಲಾಯಿತು . ಈಗ ನೋಡಿದ ಬಾಟಲ್ ನಲ್ಲಿ ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಸೋಡಿಯಂ ಕಾರ್ಬೋನೇಟ್ ಪುಡಿಯಿಂದ ತಯಾರಿಸಿದ ಬಣ್ಣ ರಹಿತ ದ್ರಾವಣದಿಂದ ಮಾದರಿ ಸಂಗ್ರಹಿಸಲಾಗಿದೆ . ಅದನ್ನು ಮು .ಮಾ. 5 ಎಂದು ಗುರುತಿಸಲಾಯಿತು . ಅದಕ್ಕೆ ಅಂಟಿಸಿರುವ ಚೀಟಿ ಮೇಲೆ ನನ್ನ ರುಜು ಇದೆ . ಸಾಕ್ಷಿಯ ರುಜುವನ್ನು ಮು.ಮಾ. 5(ಎ) ಎಂದು ಗುರುತಿಸಲಾಯಿತು . ಈಗ ನೋಡಿದ ಬಾಟಲ್ ನಲ್ಲಿ ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ನಾನು ಫಿನಾಪ್ತಲಿನ್ ಪುಡಿ ಹಚ್ಚಿದ ನೋಟುಗಳನ್ನು ಎಣಿಸಿದ ಮೇಲೆ ನನ್ನ ಎರಡೂ ಕೈ ಬೆರಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಸಿದಾಗ ದ್ರಾವಣ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಗಿರುತ್ತದೆ . ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ರುಜು ಇದೆ . ಆ ಬಾಟಲನ್ನು ಮು.ಮಾ. 6 ಎಂದು ಸಾಕ್ಷಿಯ ರುಜುವನ್ನು ಮು.ಮಾ. 6(ಎ) ಎಂದು ಗುರುತಿಸಲಾಯಿತು .(ಮೇಲ್ಕಂಡ ಮುದ್ದೆ ಮಾಲು 2 ರಿಂದ 6 ಮೊಹರು ಮಾಡಲಾಗಿರುತ್ತದೆ. ಮೊಹರುಗಳು ಸುಸ್ಥಿತಿಯಲ್ಲಿವೆ ).

5. ಈಗ ನೋಡಿದ ಎರಡು ಮೊಹರಾದ ಬಾಟಲುಗಳಲ್ಲಿ ಟ್ರ್ಯಾಪ್ ಕಾರ್ಯಾಚರಣೆ ಸಮಯದಲ್ಲಿ ಆರೋಪಿ ಬಲಗೈ ಬೆರಳು ಮತ್ತು ಎಡಗೈ ಬೆರಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಆ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿದಾಗ ಅದನ್ನು ಪ್ರತ್ಯೇಕವಾಗಿ ಜಪ್ತು ಮಾಡಿರುವುದು ಆಗಿದೆ . ಅವುಗಳನ್ನು ಮು.ಮಾ. 7 ಮತ್ತು 8 ಎಂದು ಗುರುತಿಸಲಾಯಿತು . ಅವುಗಳಿಗೆ ಅಂಟಿಸಿರುವ ಚೀಟಿಯ ಮೇಲೆ ನನ್ನ ರುಜುಗಳು ಇವೆ . ಮು.ಮಾ. 7(ಎ) ಮತ್ತು 8(ಎ) ನನ್ನ ರುಜುಗಳು ಆಗಿವೆ . ಈಗ ಮತ್ತೊಂದು ಮೊಹರಾದ ಬಿಳಿ ಬಟ್ಟೆಯಿಂದ ಸುತ್ತಿ ಸೀಲ್ ಮಾಡಿ ಜಪ್ತು ಮಾಡಿರುವ ಆರ್ಟಿಕಲ್ ಸಂ. 9(ಎ) ಗೆ ಹಾಕಿರುವ ಮೊಹರು ಸುಸ್ಥಿತಿಯಲ್ಲಿರುವುದನ್ನು ಆರೋಪಿ ಪರ ನ್ಯಾಯವಾದಿಗಳ ಸಮಕ್ಷಮದಲ್ಲಿ ಖಾತ್ರಿ ಪಡಿಸಿಕೊಂಡು ತೆರೆಯಲಾಗಿರುತ್ತದೆ . ಅದರ ಮೇಲೆ ಒಂದು ಚೀಟಿ

ಅಂಟಿಸಲಾಗಿದೆ . ಅದರಿಂದ ತೆಗೆದ ಪ್ಯಾಂಟನ್ನು ಸಾಕ್ಷಿ ನೋಡಿ ಅದು ಆರೋಪಿ ಟ್ರ್ಯಾಪ್ ಕಾರ್ಯಾಚರಣೆ ಸಮಯದಲ್ಲಿ ಧರಿಸಿದ್ದ ಮತ್ತು ಅವನಿಂದ ಅದನ್ನು ತೆಗೆಸಿ ಅಮಾನತ್ತು ಪಡಿಸಿದ ಪ್ಯಾಂಟ್ ಆಗಿದೆ ಎಂದು ಗುರುತಿಸಿದ್ದಾರೆ . ಆ ಪ್ಯಾಂಟನ್ನು ಮು.ಮಾ. 9 ಎಂದು ಗುರುತಿಸಲಾಯಿತು . ಅದರ ಬಟ್ಟೆ ಲಕೋಟೆ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ರುಜು ಇದೆ . ಆ ರುಜುವನ್ನು ಮು.ಮಾ. 9(ಎ) ಎಂದು ಗುರುತಿಸಲಾಯಿತು . ಈಗ ನೋಡಿದ ಮೊಹರಾದ ಬಾಟಲಿನಲ್ಲಿ ಆರೋಪಿಯ ಪ್ಯಾಂಟಿನ ಬಲಬದಿ ಕಿಸೆಯ ಒಳಭಾಗವನ್ನು ಸೋಡಿಯಂ ಕಾರ್ಬೋನೇಟ್ ಧ್ರಾವಣದಲ್ಲಿ ಅದ್ದಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಗಿದ್ದನ್ನು ಸಂಗ್ರಹಿಸಲಾಗಿರುತ್ತದೆ . ಆ ಬಾಟಲನ್ನು ಮು.ಮಾ. 10 ಎಂದು ಗುರುತಿಸಲಾಯಿತು . ಅದಕ್ಕೆ ಅಂಟಿಸಿರುವ ಚೀಟಿಯಲ್ಲಿ ಮೊದಲನೇ ರುಜು ನನ್ನದಾಗಿದೆ . ಆ ರುಜುವನ್ನು ಮು.ಮಾ. 10(ಎ) ಎಂದು ಗುರುತಿಸಲಾಯಿತು . ಈಗ ನೋಡಿದ ಮೊಹರಾದ ಲಕೋಟೆಯಲ್ಲಿ ಫಿರ್ಯಾದುದಾರರು ಅವರ ಮೊಬೈಲ್ ನಿಂದ ಆರೋಪಿಗೆ ಅವರ ಮೊಬೈಲ್ ಗೆ ಕರೆ ಮಾಡಿದಾಗ ನಡೆಸಿದ ಸಂಭಾಷಣೆಯನ್ನು ಧ್ವನಿ ಮುದ್ರಣ ಮಾಡಿಕೊಂಡಿದ್ದು ಅದನ್ನು ಸಿ.ಡಿ. ಯಾಗಿ ಪರಿವರ್ತಿಸಿದ ಸಿ.ಡಿ.ಆಗಿದೆ . ಅದನ್ನು ಮು.ಮಾ. 11 ಎಂದು ಗುರುತಿಸಲಾಯಿತು . ಆ ಲಕೋಟೆ ಮೇಲೆ ನನ್ನ ರುಜು ಇದೆ . ಮು.ಮಾ. 11(ಎ) ನನ್ನ ರುಜು ಆಗಿದೆ .

**<u>ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ</u>**

ಪಾಟೀ ಸವಾಲಿಗೆ ಸಮಯ ಕೋರಿದ್ದಾರೆ . ಸಾಕ್ಷಿಗೆ ರೂ . 500/- ಭತ್ಯೆ ಪಾವತಿ ಮಾಡಿದ್ದಾರೆ. ಪಾಟೀ ಸವಾಲನ್ನು ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.